## ದಾಖಲೆಯ ಭಾವಗೀತೆ!

ಗಾಯಕ ಉಪಾಸನಾ ಮೋಹನ್ ಈಗಾಗಲೇ 450ಕ್ಕೂ ಹೆಚ್ಚು ಭಾವಗೀತೆಗಳನ್ನು ಹಾಡಿ ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡಿದ್ದಾರೆ. ಸುಗಮ ಸಂಗೀತ ಕ್ಷೇತ್ರದಲ್ಲಿ ಇದುವರೆಗೂ ಬಹುಶಃ ಯಾರೂ ಇಷ್ಟೊಂದು ಭಾವಗೀತೆಗಳನ್ನು ಹೊರತಂದಿಲ್ಲ ಎಂಬುದು ಗಮನಾರ್ಹ.

ಸದ್ಯ 50 ಭಾವಗೀತೆಗಳ ಗುಚ್ಛವೊಂದನ್ನು ಅವರು ಹೊರತಂದಿದ್ದು, ಇವೆಲ್ಲವೂ ಹೊಸದಾಗಿ ರಾಗಸಂಯೋಜನೆ ಮಾಡಿದಂಥವು. ಇದರಲ್ಲಿ 18ಕ್ಕೂ ಹೆಚ್ಚು ಕವಿಗಳ ಕವನಗಳು ಇವೆ. ಕುವೆಂಪು, ಬೇಂದ್ರೆ, ಪು.ತಿ. ನರಸಿಂಹಾಚಾರ್, ನಿಸಾರ್ ಅಹಮದ್, ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಸುಬ್ರಾಯ ಚೊಕ್ಕಾಡಿ, ಎಚ್.ಎಸ್. ವೆಂಕಟೇಶಮೂರ್ತಿ, ಬಿ.ಆರ್. ಲಕ್ಷ್ಮಣರಾವ್, ಎಂ.ಎನ್. ವ್ಯಾಸರಾವ್, ಎಚ್. ಡುಂಡಿರಾಜ್, ರಂಜನಿ ಪ್ರಭು, ಸಂತೋಷ ಚೊಕ್ಕಾಡಿ, ಕಾ.ವೆಂ. ಶ್ರೀನಿವಾಸಮೂರ್ತಿ – ಹೀಗೆ ಹಿರಿಯ ಕಿರಿಯ ಕವಿಗಳ ಕವನಗಳು ಇದರಲ್ಲಿವೆ.

ಚಲನಚಿತ್ರ ಗೀತೆಗಳಿಗೂ ಮೋಹನ್ ಸಂಗೀತ ಸಂಯೋಜನೆ ಮಾಡಿದ್ದು, 'ಹಸಿರು ರಿಬ್ಬನ್' ಚಿತ್ರದ 'ಸಕ್ಕರೆಯ ಪಾಕದಲಿ' ಹಾಡಿಗೆ ಫಿಲಂಫೇರ್ ಪ್ರಶಸ್ತಿ ಸಂದಿದೆ. ಈ ಗೀತೆಯ ರಚನೆ ಚಿತ್ರದ ನಿರ್ದೇಶಕರೂ ಆಗಿರುವ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರದು.



ಹಿರಿಯ ಕವಿ ಎಚ್.ಎಸ್. ವೆಂಕಟೇಶಮೂರ್ತಿ ಅವರೊಂದಿಗೆ ಉಪಾಸನಾ ಮೋಹನ್

ಮೋಹನ್ ಈ ಸಂದಿಗ್ಧವನ್ನೂ ಗೀತೆಯ ಮೂಲಕ ಅಭಿವ್ಯಕ್ತಿಸಿದ್ದಾರೆ.

'ಶಾಲಾ ದಿನಗಳನ್ನು ನೆನೆಯದವರು ಯಾರು? ಆ ಸುಂದರ ಗಳಿಗೆಗಳನ್ನು ಮೆಲುಕು ಹಾಕುತ್ತಾ, ನಾವು ಹೀಗೆ ಮಾಡ್ತಿದ್ವಿ, ಹಾಗೆ ಆಡ್ತಿದ್ವಿ, ಎಂದೆಲ್ಲಾ ಜಂಬ ಕೊಚ್ಚಿಕೊಳ್ಳುತ್ತಾ, ನಮ್ಮ ಮಕ್ಕಳೊಂದಿಗೆ ತಮ್ಮ ಸಾಧನೆಯ ಪರಿಚಯ ಮಾಡಿಕೊಳ್ಳುವುದು ಎಲ್ಲರ ಸಹಜ ಗುಣ. ಪಾಪ ಇಂದಿನ ಮಕ್ಕಳಿಗೆ ಈ ಕೊರೊನಾ ಕಾಟದಿಂದಾಗಿ ಶಾಲೆಯ ಭಾಗ್ಯ ಸದ್ಯಕ್ಕೆ ಇಲ್ಲವಾಗಿದೆ. ಆನ್‌ಲೈನ್‌ನಲ್ಲಿ ಪಾಠ ಕಲಿಯುತ್ತಾ ಸಹಪಾಠಿಗಳ ಸಂಸರ್ಗವನ್ನು ಕಳೆದುಕೊಂಡಿದ್ದಾರೆ. ನಾಲ್ಕು ಗೋಡೆಗಳ ನಡುವೆ ಕೂತು ಕಾಲಕಳೆಯುವಂತಾಗಿದೆ. ಆ ಸವಿಗಳಿಗೆಗಾಗಿ ಕಾದು ಕುಳಿತಿರುವ ಮಕ್ಕಳ ಮನಸ್ಸಿಗೆ ಲವಲವಿಕೆ ತುಂಬಲು ಈ ಗೀತೆ' ಎನ್ನುವುದು ಗೀತೆಯ ಮೂಲಕ ಮೋಹನ್ ನೀಡುವ ವಿವರಣೆ.

### ಆತ್ಮಸ್ಥೈರ್ಯ ಬೇಕು

ಕೊರೊನಾದಿಂದಾಗಿ ಒಂದರ ಮೇಲೊಂದರಂತೆ ಕಷ್ಟಗಳು ಎರಗುತ್ತಲೇ ಇದ್ದರೂ ಅದನ್ನು ಸಹಿಸಿಕೊಳ್ಳಲು ಆತ್ಮಸ್ಥೈರ್ಯ ಬೇಕು. ಪ್ರತಿನಿತ್ಯ ವರದಿಯಾಗುತ್ತಿರುವ ಸಾವು–ನೋವುಗಳ ಸುದ್ದಿಗಳಿಂದ ನಮ್ಮ ಆತ್ಮವಿಶ್ವಾಸ ದಿನ ದಿನಕ್ಕೆ ಕ್ಷೀಣಿಸುತ್ತಿರುವ ಸಂದರ್ಭದಲ್ಲಿ ನಮ್ಮ ಮನಸ್ಸನ್ನು ದೃಢವಾಗಿ ಇಟ್ಟುಕೊಳ್ಳುವ ಪ್ರಯತ್ನವನ್ನು ಎಲ್ಲರೂ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಎಷ್ಟೇ ಅಡೆತಡೆಗಳು ಬಂದರೂ 'ದೃಢವಾಗು ಮನವೇ' ಎಂಬ ಸಂದೇಶವನ್ನು ಸಾರುವ ಗೀತೆಯನ್ನು ಮೋಹನ್ ಕೇಳುಗರಿಗಾಗಿ ಸುಶ್ರಾವ್ಯವಾಗಿ ಹಾಡಿದ್ದಾರೆ.

ಮೋಹನ್ ಅವರ ಕಂಠಸಿರಿಯಿಂದ ಹೊಮ್ಮಿದ ಇನ್ನೊಂದು ಗೀತೆಯ ಸಾರ ಹೀಗಿದೆ:

'ಸಮಸ್ಯೆಗಳು ಯಾರಿಗೆ ಇರುವುದಿಲ್ಲ ಹೇಳಿ. ಅದೂ ಈ ಕೊರೊನಾ ಮಾರಿಯಿಂದಾಗಿ ಸಣ್ಣ ವ್ಯಾಪಾರಸ್ಥರಿಂದ ಹಿಡಿದು ದೊಡ್ಡ ದೊಡ್ಡ ವ್ಯಾಪಾರಸ್ಥರೂ ಕಂಗಾಲಾಗಿ ತಲೆಮೇಲೆ ಕೈ ಹೊತ್ತು ಕುಳಿತಿದ್ದಾರೆ. ಸಾವಿರಾರು ಹೃದಯಗಳನ್ನು ಹಗುರಾಗಿಸಿ ಮತ್ತೆ ಅವರವರ ಕೆಲಸದಲ್ಲಿ ತೊಡಗಿಕೊಳ್ಳಲು ನೆರವಾಗುತ್ತಿದ್ದ ಕಲಾಪ್ರಪಂಚವೂ ಸ್ತಬ್ಧವಾಗಿದೆ. ಕಲಾವಿದರು ಬೀದಿಗೆ ಬಂದಿದ್ದಾರೆ. ಇಂಥ ಸಂದರ್ಭದಲ್ಲಿ ಮನೆಯವರಲ್ಲದೆ ಮತ್ಯಾರು ಸಾಂತ್ವನ ನೀಡಲು ಸಾಧ್ಯ?'

ಹೀಗೆ ಮೋಹನ್ ಕೊರೊನಾ ಕಾಲಕ್ಕಾಗಿಯೇ ನಿತ್ಯವೂ ಒಂದೊಂದು ಪ್ರಚಲಿತ ವಿದ್ಯಮಾನವನ್ನೊಳಗೊಂಡ ಗೀತೆ ಹಾಡಿದ್ದಾರೆ. ಇವೆಲ್ಲವೂ ಯೂಟ್ಯೂಬ್‌ನಲ್ಲಿ ಲಭ್ಯ.

ಮೋಹನ್ ಅವರ ಹಾಡು ಕೇಳಲು bit.ly/3454xtw ಕೊಂಡಿ/ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.